Request to get copies of the Statement regarding Surcharge on Tariff rates by the M. S. E. B.

ಶ್ರೀ ಹೆಚ್. ಸಿದ್ದವೀರಪ್ಪ.—ನನ್ನ ಕ್ರಿಯಾಲೋಪ ಇನ್ನೂ ಹಾಗೇ ಇದೆ.

Whenever the paper is laid on the Table of the House it immediately becomes the property of the House and the Members are entitled to have a copy of the paper.

Sri D. B. KALMANKAR.—I rise to a point of order. The Hon. Deputy Minister has made a statement just now regarding a matter about which I have given a call attention notice. I have not been given a copy of that statement.

Mr. DEPUTY SPEAKER.—I will look into it.

Affairs at the Regulated Market at Raichur

Sri M. NAGAPPA.—I have sent a notice of adjournment motion regarding closing of trade in Regulated Market at Raichur. The Minister incharge is to make a statement as per the instructions of the Hon. Chair. I want to know when the matter is going to be taken up.

Mr. DEPUTY SPEAKER.—The Hon. Minister will make a statement on the 10th instant.

Sri M. NAGAPPA.—When this question was raised, the Chair has directed the Minister to make a statement today. Today is already 8th.

Mr. DEPUTY SPEAKER.—I will ascertain once again and ask the Minister to make a statement.

ಶ್ರೀ ಎಂ. ನಾಗಪ್ಪ.—ರಾಯಚೂರಿನ ರೆಗ್ಯುಲೇಟೆಡ್ ಮಾರ್ಕೆಟ್ ಮಾರ್ಚ್ 28 ರಂದು ಮುಚ್ಚಿದೆ. ನಾನು ಮಾರ್ಚ್ 23 ನೇ ತಾರೀಖು ಇದರ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೆ. ಇಪ್ಪತ್ತಿನವರೆಗೂ ತಾವು ಅದರ ಬಗ್ಗೆ ಸ್ಟೇಟ್‌ಮೆಂಟ್ ಕೊಡಲಿಲ್ಲ. ಗುಂಜಿನಲ್ಲಿ ಸಹಸ್ರಾರು ಹತ್ತಿ ಅರಳಿ ಮತ್ತು ಇತರ ರೈತರ ಕಾಳುಗಳು ವರ್ಷಾನುಗಟ್ಟಲೆಯಿಂದ ಸೇರಿಸಿಕೊಂಡಿಂಥ ಮಾಲುಗಳು ಮಾರ್ಕೆಟ್‌ಗೆ ಬಂದು ವ್ಯಾಪಾರವಾಗದೆ ಹಾಗೆಯೇ ಉಳಿದಿವೆ. ಇದರ ಬಗ್ಗೆ 10ನೇ ತಾರೀಖು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದರೆ, ಇದು ಮುಖ್ಯವಾದ ಪ್ರಶ್ನೆ ಅಲ್ಲವೇ ?

ಶ್ರೀ ಸದಾಶಿವಪ್ಪ ಪಾಟೀಲ್.—ರಾಯಚೂರಿನಲ್ಲಿ 4—5 ದಿವಸದಿಂದ ಮಾರ್ಕೆಟ್ ಮುಚ್ಚಿದೆ. ಈ ಮುಂಚೆ ಅಲ್ಲ ದಳ್ಳಾಳಿ ಕಮೀಷನ್ 100ಕ್ಕೆ 2 ರೂಪಾಯಿನಂತೆ ಕಲೆಕ್ಷನ್ ಮಾಡುತ್ತಾ ಇದ್ದರು. ಈಗ 1½ ರೂಪಾಯಿ ಕಲೆಕ್ಷನ್ ಮಾಡುತ್ತಿದ್ದಾರೆ. ಈ ದುಡ್ಡು ಸರ್ಕಾರಕ್ಕೆ ಬರುತ್ತದೆಯೇ ? ಆ ದ ಡ್ಡನ್ನು ವಾಪಸ್ ಕೊಡಿಸುತ್ತೀರಾ ? ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಂ. ನಾಗಪ್ಪ.—ನಿನ್ನೆ ದಿವಸ ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ದಯವಿಟ್ಟು ಯಾವಾಗ ಹೇಳುತ್ತಾರೆ ಎನ್ನುವುದನ್ನು ತಿಳಿಸಬೇಕು.

ಉಪಾಧ್ಯಕ್ಷರು.—ನನಗೆ ಆ ವಿಷಯವೇ ಗೊತ್ತಿಲ್ಲ. ಮಂತ್ರಿಗಳನ್ನು ಕೇಳಿ ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ನಾನು ನಿನ್ನೆ ದಿವಸ ಸ್ಪೆಸಿಫಿಕ್ ಆಗಿ ಹೇಳಿದ್ದೇನೆ. ಕೇಳಿ ತಿಳಿದುಕೊಳ್ಳುತ್ತೇನೆ ಎಂದರೆ ಏನು ಅರ್ಥ ?

ಶ್ರೀ ನಜಾಶಿವಪ್ಪ ಪಾಟೀರ್.—ನೀವು ನಾವು ಏನಾದರೂ ಕೇಳಿದರೆ ಮಿನಿಸ್ಟರ್ ಇಲ್ಲ ಎಂದು ಬಹು ಸುಲಭವಾಗಿ ಹೇಳುತ್ತೀರಿ. ನಾವು ಹೇಳುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಆದರೆ ನಮ್ಮ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ.

ಉಪಾಧ್ಯಕ್ಷರು.—ಇದಕ್ಕೆ ಸಮಯ ಕಳೆಯುವುದು ಸರಿಯಲ್ಲ.

ಶ್ರೀ ಎಂ. ನಾಗಪ್ಪ.—ನಾವು ಸಮಯ ಕಳೆಯಬೇಕೆಂದಿಲ್ಲ. ಸ್ಟೇಟ್‌ಮೆಂಟ್ ಯಾವಾಗ ಮಾಡುತ್ತಾರೆಂಬುದನ್ನು ಹೇಳಿ ಅಷ್ಟಾದರೂ ಭರವಸೆಯನ್ನು ಕೊಡುವುದಿಲ್ಲವೇ, ಸ್ವಾಮಿ ?

ಉಪಾಧ್ಯಕ್ಷರು.—ನಾನು ತಿಳಿದುಕೊಂಡು ಹೇಳುತ್ತೇನೆ.

Sri B. P. GANGADHAR.—May I know what happened to the privilege motion against the Press?

ಉಪಾಧ್ಯಕ್ಷರು.—ಕಾರ್ಯಕಲಾಪಗಳ ಸಲಹಾ ಸಮಿತಿ ಇಂದು ಸೇರಿ ಯಾವಾಗ ಆ ವಿಷಯಗಳಿಗೆ ಅವಕಾಶ ಕೊಡಬೇಕು ಎಂದು ತೀರ್ಮಾನ ಮಾಡುತ್ತದೆ.

Mysore Land Revenue (Second Amendment) Bill, 1969

Motion to Consider—(Debate Contd).

† ಶ್ರೀ ಎಸ್. ಗೊಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ನಿನ್ನೆ ರಾಜಸ್ವ ಮಂತ್ರಿಗಳು ಸಭೆಯ ಮುಂದೆ ಮಂಡಿಸಿದ ಭೂಕಂದಾಯದ ಎರಡನೇ ತಿದ್ದುಪಡಿ ವಿಧೇಯಕದ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೇನೆ. ಅದಷ್ಟು ಬೇಗ ಭಾಷಣ ಮುಗಿಸಬೇಕು ಎನ್ನುವ ಆಸೆ ನನಗೂ ಇದೆ. ಆದರೆ ಏನು ಹೇಳಬೇಕು, ಏನು ಹೇಳಬಾರದು ಎನ್ನುವುದರ ಬಗ್ಗೆ ನನಗೆ ತೀರ್ಮಾನಕ್ಕೆ ಬರುವುದು ಬಹಳ ಕಷ್ಟವಾಗಿದೆ. ಮೇಲಿಂದ ಮೇಲೆ ಸರ್ಕಾರದವರು ಕೆಲವು ಮಾತುಗಳನ್ನು ಇಲ್ಲಿ ಹೇಳುತ್ತಿರುತ್ತಾರೆ. ಅದು ಯಾವ ವಿಚಾರವಂತನಿಗೇ ಆಗಲಿ ಅವನ ಮನಸ್ಸನ್ನು ಪ್ರಚೋದನೆ ಮಾಡದೆ ಇರರಾರದು, ಕಳವಳವನ್ನು ಉಂಟುಮಾಡದೆ ಇರರಾರದು ಎಂದು ನನಗನ್ನಿಸುತ್ತದೆ. ಈಗತಾನೇ ಭಾರಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಇರಾಖೆಯನ್ನು ನಿರ್ವಹಿಸುತ್ತಿರುವ ಮಾನ್ಯ ಸಚಿವರೊಬ್ಬರು ಈಚೆಗೆ ರಾಜ್ಯವಿದ್ಯುಚ್ಛಕ್ತಿ ಮಂಡಲಿಯವರು ಏನು ದರ ಏರಿಸಿದ್ದಾರೆ ಅದು ಹೆಚ್ಚೇನೂ ಆಗುವುದಿಲ್ಲ, ಅದರಿಂದ ರೈತರಿಗೆ ತೊಂದರೆಯಾಗುವುದಿಲ್ಲ ಎನ್ನುವ ಅರ್ಥದಲ್ಲಿ ಅವರು ಮಾತನಾಡಿದರು. ಮಾನ್ಯ ಸಭೆಯ ಸದಸ್ಯರಿಗೆ ಈಗಾಗಲೇ ತಿಳಿದಿದೆ, ಕೇಂದ್ರ ಸರ್ಕಾರದವರು ಈ ವರ್ಷದ ಆಯವ್ಯಯದಲ್ಲಿ ಭೂಸಂಪತ್ತಿನ ಮೇಲೆ ತೆರಿಗೆಯನ್ನು ವಿಧಿಸಬೇಕು ಎಂತಲೂ, ಪಂಪ್‌ಸೆಟ್‌ಗಳ ಮೇಲೆ ತೆರಿಗೆಯನ್ನು ವಿಧಿಸಬೇಕು ಎಂತಲೂ, ರಾಸಾಯನಿಕ ಗೊಬ್ಬರಗಳ ಮೇಲೆ ಹೆಚ್ಚಿನ ಬೆರೆಯನ್ನು ನಿಗದಿ ಮಾಡಬೇಕು ಎಂತಲೂ ತೀರ್ಮಾನ ಮಾಡಿದ್ದಾರೆ. ಇದೆಲ್ಲ ಹೊರೆ ಬೀಳುವುದು ರೈತರ ಮೇಲೆ. ಈಗಾಗಲೇ ರಾಜ್ಯದ ರಾಜಸ್ವ ಮಂತ್ರಿಗಳು ತಿದ್ದುಪಡಿ ಮಾಡಿ ಪಡೆದುಕೊಳ್ಳತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಈ ಅನಿಷ್ಟಗಳನ್ನೆಲ್ಲ ತಡೆಗಟ್ಟುವಂಥ ಶಕ್ತಿ ಬರುವುದಿಲ್ಲ. ಹೆಣದ ಮೇಲೆ ಏನನ್ನಾದರೂ ಹೇರ ಬಹುದು. ಹಾಗೆಯೇ ರೈತರ ಮೇಲೆ ಹೇರುತ್ತ ಹೋಗತಕ್ಕ ಕರಭಾರಗಳು. ಅವರು ಈಗಾಗಲೇ ನೆಲ ಹಿಡಿದಿದ್ದಾರೆ. ಗ್ರಾಮ ಪಂಚಾಯತಿಗಳ ಮಟ್ಟದ ಸೆಸ್‌ಗಳಿಂದ ಹಿಡಿದು ಮೊರಾರ್ಜಿ ಸರ್ಕಾರದ ಹೊಸ ತೆರಿಗೆಗಳ ತನಕ ಇದು ಅವನನ್ನು ಮಣ್ಣು ಮಾಡುತ್ತಿದೆ. ಇದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು. ಈಗ ವಿದ್ಯುಚ್ಛಕ್ತಿ ಮಂಡಲ ದರವನ್ನು ಏರಿಸಿರುವುದರಿಂದ ರೈತರಿಗೆ, ಬಳಕೆದಾರರಿಗೆ, ದೀಪ ಉರಿಸುವವರಿಗೆ ತೊಂದರೆಯಾಗುವುದಿಲ್ಲವೆಂದು ಹೇಳಿದರು, ಇದರ ಒಗ್ಗೆ ವಿಷಾದದಿಂದ ಪ್ರತಿಭಟಿಸಬೇಕಾಗಿದೆ. ಈಗ ಅನೇಕ ಕಡೆಗಳಿಂದ ವಿರೋಧ ವ್ಯಕ್ತವಾಗಿದೆ. ಹಳ್ಳಿಗಳವರಿಗೆ ಬಾಕಿ ಕಟ್ಟದಿದ್ದರೆ ಕನೆಕ್‌ಷನ್ ತಪ್ಪಿಸುವುದಾಗಿ ನೋಟೀಸು ಕೊಟ್ಟಿರುವುದನ್ನು ಗಮನಿಸಬೇಕು. ರೈತರಿಗೆ ಪಂಪುಸೆಟ್ಟು, ನೀರಾವರಿ ಸೌಲಭ್ಯ, ಗೊಬ್ಬರ, ತಕಾವಿ ಸಾಲ, ಒಳ್ಳೆಯ ಬೀಜ, ಒಳ್ಳೆಯ ಹೋರಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದಕ್ಕೆ ಒಂದು ಯಂತ್ರವಿದೆ, ಲಕ್ಷಾಂತರ ಜನರು ಕೆಲಸಮಾಡುತ್ತಿದ್ದಾರೆ, ಕೋಟಿಗಟ್ಟಲೆ ಸಂಬಳ ಕೊಡುತ್ತಿದ್ದಾರೆ. ಅದುದರಿಂದ ಈ ಕಾರ್ಯ ನಡೆಯುವುದು. ವಾಸ್ತವವಾಗಿ ಸರಕಾರ ಹೇಗೆ ನಡೆಸುತ್ತಿದ್ದೀರೆಂಬ ಅರಿವು ಆಗಿರುವ ಅಗೆ ಕಾಣುವುದಿಲ್ಲ. ಇಷ್ಟೆಲ್ಲಾ ಹಣ ಖರ್ಚುಮಾಡಿ ನಾಲ್ಕೈದು ವರ್ಷಕಾಲ ಅಧಿಕಾರಿಗಳು ಸರಕಾರದವರು ನೀಡಿದ ಆದೇಶದಮೇಲೆ ವರದಿ ಕೊಟ್ಟಮೇಲೆ ಹೊಸ